# ಸ್ವೀಡನ್‌ನ ಸೋಫಿಯಾರ ಪಟಾಕಿ ಸಂಭ್ರಮ


ಸೋಫಿಯಾ ನಿಕ್ಲಾಸನ್

ದೀಪಾವಳಿಯ ಪಟಾಕಿಯ ಸದ್ದು ಹಬ್ಬ ಆಚರಿಸಿದ ಮಕ್ಕಳಿಗೆ ಎಂದಿಗೂ ಪುಳಕಗೊಳಿಸುವ ಸಂಗತಿ. ಜತೆಗಿಷ್ಟು ಸಿಹಿತಿಂಡಿ, ಹೊಸಬಟ್ಟೆ, ದೀಪಗಳ ಸಾಲು.. ಹಬ್ಬದ ಸಂಭ್ರಮವನ್ನು ಇಮ್ಮಡಿಗೊಳಿಸುತ್ತದೆ. ಸ್ವೀಡನ್‌ನಿಂದ ಬೆಂಗಳೂರಿಗೆ ಬಂದ ಸೋಫಿಯಾ ನಿಕ್ಲಾಸನ್ ಜೀವನದಲ್ಲಿ ಮೊದಲ ಬಾರಿಗೆ ಇಲ್ಲಿ ದೀಪಾವಳಿ ಹಬ್ಬವನ್ನು ಸಂಭ್ರಮಿಸಿದರು. ಪಟಾಕಿಗಳ ಸದ್ದಿಗೆ, ಹಣತೆಗಳ ಬೆಳಕಿಗೆ, ಸಿಹಿತಿಂಡಿಗಳ ಭರಾಟೆಗೆ, ಜನರ ಸಂಭ್ರಮ ಕಂಡು ಅಕ್ಷರಶಃ ಪುಳಕಗೊಂಡರು.

ಈ ಸಂಭ್ರಮವನ್ನು ಸೋಫಿಯಾ ಹಂಚಿಕೊಂಡಿದ್ದು ಹೀಗೆ: 'ಹಬ್ಬಗಳ ಆಚರಣೆ ಬಗ್ಗೆ ಬಹಳ ಕುತೂಹಲವಿತ್ತು. ಈ ಸಲ ದೀಪಾವಳಿ ಹಬ್ಬಕ್ಕೆ ಸರಿಯಾಗಿ ನಾನಿಲ್ಲಿದ್ದೆ. ಹಬ್ಬದ ದಿನದ ಸಡಗರ, ರಂಗೋಲಿ, ಸ್ವೀಟ್ಸ್, ಹೊಸ ಬಟ್ಟೆ ಸಂಭ್ರಮ, ಹಸುವಿಗೆ ಪೂಜೆ ಎಲ್ಲ ನೋಡುವ ಭಾಗ್ಯ ನನ್ನದಾಯಿತು. ನಿಜಕ್ಕೂ ನಾನು ಸಂಭ್ರಮಪಟ್ಟೆ. ಪಟಾಕಿ, ದೀಪಗಳ ಸಾಲು ನನಗೆ ಹೊಸ ಅನುಭವ. ನಾನು ಮನೆಯ ಟೆರೇಸ್ ಮೇಲೆ ಹೋಗಿ ದೀಪಾವಳಿ ಹಬ್ಬದ ಸಂಭ್ರಮವನ್ನು ನೋಡಿ ಖುಷಿಪಟ್ಟೆ. ಇಂತಹ ಹಬ್ಬದ ಸಂಭ್ರಮ ಸ್ವೀಡನ್‌ನಲ್ಲಿ ಇದುವರೆಗೂ ನೋಡಿರಲಿಲ್ಲ. ಹೀಗಾಗಿ ದೀಪಾವಳಿ ಹಬ್ಬ ಪುಳಕ ಕೊಟ್ಟಿತು.'

ವೋಲ್ವೊ ಕಾರು, ಬಸ್ ತಯಾರಿಕೆಗೆ ಹೆಸರಾದ ಸ್ವೀಡನ್ ದೇಶ ವಿಶ್ವದಾದ್ಯಂತ ತನ್ನ ವಹಿವಾಟನ್ನು ವಿಸ್ತರಿಸಿದೆ. ಸ್ವೀಡನ್ ನ ಗೋಥೆನ್‌ಬರ್ಗ್‌ನಲ್ಲಿ 1927ರಲ್ಲಿ ಸ್ಥಾಪಿಸಲಾದ ವೋಲ್ವೊ ಕಂಪೆನಿಯ ಅನೇಕ ಶಾಖೆಗಳು ಬೆಂಗಳೂರಿನಲ್ಲೂ ಇದ್ದು, ಸ್ವೀಡನ್‌ನಿಂದಲೇ ಬಂದ ಬಹಳಷ್ಟು ಮಂದಿ ಇಲ್ಲಿ ಉದ್ಯೋಗದಲ್ಲಿದ್ದಾರೆ. ಜಗತ್ತಿನ ಒಟ್ಟು 16 ದೇಶಗಳಲ್ಲಿ ವೋಲ್ವೊ ವಹಿವಾಟು ನಡೆಸುತ್ತಿದೆ. ಆದರೆ ಸೋಫಿಯಾ ಬೆಂಗಳೂರಿಗೆ ಬಂದದ್ದು ಸ್ಟೇ ವೆ ಡಾಟ್‌ಕಾಮ್ ಕಂಪೆನಿಯ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ (ಸಿಇಒ) ಆಗಿ. ಇದು ಆನ್‌ಲೈನ್ ಹೋಟೆಲ್ ಬುಕಿಂಗ್ ಕಂಪೆನಿಯಾಗಿದ್ದು ಜಗತ್ತಿನಾದ್ಯಂತ ಇರುವ ಒಂದು ಲಕ್ಷಕ್ಕೂ ಹೆಚ್ಚು ಹೋಟೆಲ್‌ಗಳ ಬುಕಿಂಗ್ ಅನ್ನು ಈ ಕಂಪೆನಿ ಮಾಡುತ್ತದೆ. ಈ ಕಂಪೆನಿಯನ್ನು ಬೆಂಗಳೂರಿನಲ್ಲಿ ಅಭಿವೃದ್ಧಿಪಡಿಸಿ, ಬಲಪಡಿಸುವುದು ಸೋಫಿಯಾ ಅವರ ಗುರಿ ಅಂತೆ.

ಸದ್ಯ ಸೋಫಿಯಾ ಇಂದಿರಾನಗರದಲ್ಲಿ ಒಂಟಿಯಾಗಿ ವಾಸವಾಗಿದ್ದಾರೆ. ತಂದೆ ತಾಯಿಯರನ್ನು ಒಳಗೊಂಡ ಇವರ ಕುಟುಂಬ ಸ್ವೀಡನ್‌ನಲ್ಲೇ ಇದೆ.

'ಇಲ್ಲಿನ ಸಂಸ್ಕೃತಿ ಸ್ವೀಡನ್‌ಗಿಂತ ವಿಭಿನ್ನ. ಇಲ್ಲಿನ ವಾತಾವರಣಕ್ಕೆ, ಸಂಸ್ಕೃತಿಗೆ ಹೊಂದಿಕೊಳ್ಳಲು ಪ್ರಯತ್ನಿಸುತ್ತಿರುವೆ. ಈ ದೇಶ, ನಗರ ಮತ್ತು ಜನರನ್ನು ಅರ್ಥ ಮಾಡಿಕೊಳ್ಳಬೇಕಾಗಿದೆ. ಇಲ್ಲಿ ನನಗೆ ಅತ್ಯಂತ ಖುಷಿ ಕೊಟ್ಟ ವಿಚಾರ ಎಂದರೆ ಭಾಷೆ. ನನಗೆ ಕನ್ನಡ, ಹಿಂದಿ ಮಾತನಾಡಲು ಬರದೇ ಇದ್ದರೂ ಇಂಗ್ಲಿಷ್ ಭಾಷೆ ಎಲ್ಲರೂ ಮಾತನಾಡುವುದರಿಂದ ಸಮಸ್ಯೆಯೇ ಬರಲಿಲ್ಲ' ಎನ್ನುತ್ತಾರೆ ಸೋಫಿಯಾ.

'ಸ್ವೀಡನ್‌ನ ಹವಾಗುಣ ಬಹಳ ವಿಭಿನ್ನ. ಚಳಿ ಮತ್ತು ಮಳೆಯಿಂದ ಕೂಡಿದ ವಾತಾವರಣ ಅಲ್ಲಿದೆ. ಸ್ವೀಡನ್‌ನಲ್ಲಿ ಈಗ 10 ಡಿಗ್ರಿ ಉಷ್ಣಾಂಶವಿದೆ. ಆದರೆ ಇಲ್ಲಿ ಅತ್ಯಂತ ಹಿತಕರ ಗಾಳಿ, ಹವೆ, ವಾತಾವರಣವಿದೆ. ವಾಸಕ್ಕೆ ಯೋಗ್ಯವಾದ ವಾತಾವರಣ ಇಲ್ಲಿರುವುದರಿಂದ ಈ ನಗರವನ್ನು ಬಹಳ ಇಷ್ಟಪಡುತ್ತೇನೆ' ಎಂದು ಹೇಳುತ್ತಾರೆ ಇವರು.

### ಸ್ವೀಡನ್‌ನ ಆರ್ಥಿಕ ಪರಿಸ್ಥಿತಿ ಹೇಗಿದೆ?

'ಭಾರತ ಸ್ವೀಡನ್‌ಗಿಂತ ಬಹಳ ದೊಡ್ಡ ದೇಶ. ಆದರೆ ಸ್ವೀಡನ್ ಆರ್ಥಿಕವಾಗಿ ಬಹಳ ಬೆಳೆದಿದೆ. ಒಳ್ಳೊಳ್ಳೆಯ ಕಂಪೆನಿಗಳು ಅಲ್ಲಿವೆ. ಉದ್ಯಮಗಳೂ ನೆಲೆ ನಿಂತಿವೆ. ಆದರೂ ನಾನು ಬೆಂಗಳೂರಿಗೆ ಬಂದದ್ದು ನಮ್ಮ ಕಂಪೆನಿಯನ್ನು ಬೆಳೆಸುವ ಸಲುವಾಗಿ. ಅಲ್ಲಿಗಿಂತಲೂ ಇಲ್ಲಿ ಹೆಚ್ಚಿನ ಅವಕಾಶಗಳಿವೆ ಎಂಬುದನ್ನು ನಾನು ಅರಿತಿದ್ದೇನೆ' ಎಂದು ವಿವರ ನೀಡುತ್ತಾರೆ ಸೋಫಿಯಾ.

'ಭಾರತದಲ್ಲಿ ನೂರಾರು ಸುಂದರವಾದ ಪ್ರೇಕ್ಷಣೀಯ ಸ್ಥಳಗಳಿವೆ. ಆದರೆ ಹೆಚ್ಚಿನ ಜಾಗವನ್ನು ನೋಡಲಾಗಿಲ್ಲ. ಬೇಲೂರು ಹಳೆಬೀಡುಗಳನ್ನು ನೋಡಿದ್ದೇನೆ. ನಿಜವಾಗಿಯೂ ಅದ್ಭುತ ಜಾಗ ಅದು. ಇನ್ನೂ ಹತ್ತಾರು ತಾಣಗಳನ್ನು ನೋಡುವ ಆಸೆ. ಆದರೆ ಅದಕ್ಕೆ ಇನ್ನೂ ಸಮಯಾವಕಾಶ ಬೇಕು. ವಾರಾಂತ್ಯದ ರಜೆ ವಿಶ್ರಾಂತಿಗಾಗಿ, ನಗರವನ್ನು ಸುತ್ತುವುದಕ್ಕಾಗಿ, ಸಮಾರಂಭಗಳಲ್ಲಿ ಭಾಗವಹಿಸುವುದಕ್ಕಾಗಿ ಮೀಸಲು' ಎನ್ನುವ ಸೋಫಿಯಾ, 'ನಾನು ಬೆಂಗಳೂರಿಗೆ ಬಂದಾಗ ನನಗೆ ಸ್ನೇಹಿತರಾರೂ ಇರಲಿಲ್ಲ. ಆದರೆ ಎಕ್ಸ್‌ಪಾಟ್ ಲೈಫ್ ಇಂಡಿಯಾದ ಅಧ್ಯಕ್ಷೆ ಎಮ ಟ್ರಿನಿಡಾಡ್ ಅವರ ಪರಿಚಯವಿತ್ತು. ಅವರು ಒಂದು ಔತಣಕೂಟ ಏರ್ಪಡಿಸಿ ಅನೇಕ ಸ್ನೇಹಿತರನ್ನು ಪರಿಚಯಿಸಿದರು. ಹೀಗಾಗಿ ಎಮ ಅವರ ಸಹಕಾರದಿಂದ ನನಗೆ ಈಗ ಅನೇಕ ಜನರ ಪರಿಚಯವಾಗಿದೆ. ಅವರೊಂದಿಗೆ ಇಲ್ಲಿನ ಅನೇಕ ಹೋಟೆಲ್‌ಗಳಿಗೆ ಹೋಗಿ ಹಲವು ರುಚಿಕರ ತಿಂಡಿಗಳ ರುಚಿ ನೋಡಿದ್ದೇನೆ. ನಮ್ಮ ಆಹಾರ ಪದ್ಧತಿಗೂ ಇಲ್ಲಿಗೂ ಬಹಳ ವ್ಯತ್ಯಾಸವಿದೆ. ಸ್ವೀಡನ್‌ನಲ್ಲಿ ಹೆಚ್ಚಾಗಿ ಮಸಾಲೆ ಭರಿತ ಊಟ ತಿಂಡಿಗಳಿದ್ದರೆ ಇಲ್ಲಿ ಮಸಾಲೆ ಬಳಸುವುದು ಬಹಳ ಕಡಿಮೆ. ಸ್ವೀಡನ್‌ನ ಊಟದಲ್ಲಿ ಚಿಕನ್, ಫಿಶ್‌ಫ್ರೈ ಇದ್ದೇ ಇರುತ್ತದೆ. ಆಲೂ ಬಳಕೆ ಹೆಚ್ಚು. ಸಲಾಡ್, ಸಾಸ್ ಬೇಕೇ ಬೇಕು' ಎಂದು ತಮ್ಮ ದೇಶದೊಂದಿಗೆ ತುಲನೆ ಮಾಡುತ್ತಾರೆ ಇವರು.

ಸ್ವೀಡನ್‌ನಲ್ಲಿ ಶಿಕ್ಷಣ ವ್ಯವಸ್ಥೆ ಚೆನ್ನಾಗಿದೆ. ಜನ ಪರಿಶ್ರಮಿಗಳು. ಉತ್ತಮ ಕೆಲಸ, ಸಂಬಳ ಎಲ್ಲವೂ ಇದೆ. ಕೆಲಸದ ವಾತಾವರಣವೂ ಚೆನ್ನಾಗಿದೆ. ಆದರೆ ಜನ ಬೇರೆಯವರೊಂದಿಗೆ ಬೆರೆಯುವುದಿಲ್ಲ. ಇಲ್ಲಿನ ಜನ ಸ್ನೇಹಜೀವಿಗಳು. ಬೇಗ ಸ್ನೇಹಿತರಾಗುತ್ತಾರೆ, ಬೆರೆಯುತ್ತಾರೆ. ಸಹಾಯ ಮಾಡುತ್ತಾರೆ. ಹೀಗಾಗಿ ಇಲ್ಲಿ ಕೆಲಸ ಮಾಡಲು ಬಹಳ ಖುಷಿಯಾಗುತ್ತದೆ ಎನ್ನುತ್ತಾರೆ ಸೋಫಿಯಾ.

★ **ಅವನೀಶ್**